

ಸಾಮಾನ್ಯವಾಗಿ ನಲವತ್ತೈದು ವರ್ಷ ದಾಟಿದ ಮಹಿಳೆಯರಲ್ಲಿ ಗರ್ಭಕೋಶದಲ್ಲಿ ಗಡ್ಡೆಗಳು (ಯುಟರಲ್ ಫೈಬ್ರಾಯಿಡ್) ಬೆಳೆಯಲಾರಂಭಿಸುತ್ತವೆ. ಇವು ಕ್ಯಾನ್ಸರ್‌ಕಾರಕವಲ್ಲ; ಹಾನಿಕಾರಕವೂ ಅಲ್ಲ.

# ಗರ್ಭಾಶಯ ಗಡ್ಡೆ ಹಾನಿಕಾರಕವಲ್ಲ

■ ಉಮಾ ಅನಂತ್

ಮೈಸೂರಿನ 45ರ ಹರೆಯ ಮಲ್ಲಿಕಾಗೆ ವಿಪರೀತ ಹೊಟ್ಟೆನೋವು, ಅತಿಯಾದ ರಕ್ತಸ್ರಾವ, ಕಾಲುಗಳಲ್ಲಿ ಅಸಾಧ್ಯ ಸೆಳೆತ, ಮೂತ್ರಕೋಶದಲ್ಲಿ ನೋವು ಉಂಟಾಗಿ ಆಗಾಗ ಮೂತ್ರ ವಿಸರ್ಜಿಸಬೇಕೆಂಬ ಸಮಸ್ಯೆ... ಇವೆಲ್ಲವುಗಳಿಂದ ಮಲ್ಲಿಕಾ ಬಹಳ ನೊಂದಿದ್ದರು. ಬೊಜ್ಜು ಹಾಗೂ ಅತಿತೂಕ ಸಮಸ್ಯೆಯಿಂದಲೂ ಬಳಲುತ್ತಿದ್ದ ಈಕೆ ವೈದ್ಯರ ಬಳಿ ಹೋಗಿ ತಪಾಸಣೆ ಮಾಡಿಸಿದಾಗ ಆಕೆಯ ಗರ್ಭಾಶಯದಲ್ಲಿ ಸುಮಾರು ಏಳು ಕೇಜಿ ತೂಕದ ಬೃಹತ್ ಗಡ್ಡೆ ಇರುವುದು ಪತ್ತೆಯಾಗಿತ್ತು. ಇದನ್ನು ವೈದ್ಯರು 'ಟೋಟಲ್ ಅಬ್ಡಮಿನಲ್ ಹಿಸ್ಟರೆಕ್ಟಮಿ' ಮೂಲಕ ತೆಗೆದುಹಾಕಿದರು. ಈಗ ಮಹಿಳೆ ಸಂಪೂರ್ಣ ಚೇತರಿಸಿಕೊಂಡಿದ್ದಾರೆ.

ಸಾಮಾನ್ಯವಾಗಿ ನಲವತ್ತೈದು ವರ್ಷ ದಾಟಿದ ಮಹಿಳೆಯರಲ್ಲಿ ಗರ್ಭಕೋಶದ ಗಡ್ಡೆಗಳು ಕಾಣಿಸಿಕೊಳ್ಳಲಾರಂಭಿಸುತ್ತವೆ. ಮಾಸಿಕಚಕ್ರದ ಸಂದರ್ಭದಲ್ಲಿ ವಿಪರೀತ ರಕ್ತಸ್ರಾವ, ಹೊಟ್ಟೆನೋವು, ಮೂತ್ರಕೋಶದ ತೊಂದರೆ ಮುಂತಾದವು ಉಂಟಾಗಲು ಗರ್ಭಕೋಶದಲ್ಲಿ ಬೆಳೆದಿರುವ ಕ್ಯಾನ್ಸರ್‌ಕಾರಕವಲ್ಲದ ಗಡ್ಡೆಗಳು ಕಾರಣವಾಗುತ್ತದೆ.

'ಮಹಿಳೆಯರಲ್ಲಿ ಅದರಲ್ಲೂ ಮೂವತ್ತರಿಂದ ಐವತ್ತು ವರ್ಷದೊಳಗಿನ ಪ್ರತಿ ನಾಲ್ಕು ಮಹಿಳೆಯರಲ್ಲಿ ಒಬ್ಬರಿಗೆ ಈ ಗರ್ಭಕೋಶ ಗಡ್ಡೆಗಳ ಸಮಸ್ಯೆ ಇದ್ದೇ ಇರುತ್ತದೆ ಎಂಬುದು ಅಧ್ಯಯನದಿಂದ ಸಾಬೀತಾಗಿದೆ. ಕೆಲವರಿಗೆ ಇದು ವಂಶಪಾರಂಪರ್ಯವೂ ಆಗಿರಬಹುದು. ಆದರೆ ಅನೇಕರಿಗೆ ಅತಿತೂಕ (70 ಕೇಜಿಗಿಂತ ಹೆಚ್ಚು ತೂಕ ಇರುವುದು) ಈಸ್ಟ್ರೋಜನ್ ಹಾರ್ಮೋನಿನಲ್ಲಾಗುವ ಏರುಪೇರು ಮುಂತಾದವುಗಳಿಂದ ಈ ಗಡ್ಡೆಗಳು ಬೆಳೆಯುತ್ತವೆ. ಆದರೆ ಋತುಬಂಧನ ನಂತರ ಈ ಗಡ್ಡೆಗಳು ತನ್ನಿಂದ ತಾನಾಗಿ ಕರಗಿ ಹೋಗುವ ಸಾಧ್ಯತೆ ಇದೆ. ಮಿತಿಮೀರಿ ಗಡ್ಡೆ ಬೆಳೆದು ತೊಂದರೆ ಕೊಡಲಾರಂಭಿಸಿದರೆ, ಅತಿಯಾದ ರಕ್ತಸ್ರಾವ ಉಂಟಾಗುತ್ತಿದ್ದರೆ ಕೂಡಲೇ ನುರಿತ ಸ್ತ್ರೀರೋಗ ತಜ್ಞರ ಬಳಿ ತಪಾಸಣೆ ಕೈಗೊಳ್ಳಬೇಕು' ಎಂದು ಹೇಳುತ್ತಾರೆ ಬೆಂಗಳೂರಿನ ರಾಧಾಕೃಷ್ಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕಿ ಹಾಗೂ ಲ್ಯಾಪರೊಸ್ಕೋಪಿಕ್ ಸರ್ಜನ್ ಆಗಿರುವ ಡಾ. ವಿದ್ಯಾ ವಿ. ಭಟ್.

'ಗರ್ಭಾಶಯದಲ್ಲಿ ಕಾಣಿಸಿಕೊಳ್ಳುವ ಗಡ್ಡೆಗಳು ಹಾನಿಕಾರಕವಲ್ಲ. ಕ್ಯಾನ್ಸರ್‌ಕಾರಕವೂ ಅಲ್ಲ. ಅಲ್ಲದೆ ಜೀವಕ್ಕೆ ಮಾರಕವಾಗುವುದೂ ಇಲ್ಲ. ಬಹುತೇಕ 40 ದಾಟಿದ ಮಹಿಳೆಯರನ್ನು ಇದು ಕಾಡುತ್ತದೆ. ಈ ಗಡ್ಡೆಗಳನ್ನು ಹೊಂದಿರುವ ಹೆಚ್ಚಿನ ಮಹಿಳೆಯರಲ್ಲಿ ಇದರ ಯಾವುದೇ ಲಕ್ಷಣಗಳೂ ಕಾಣಿಸಿಕೊಳ್ಳುವುದಿಲ್ಲ. ಆದರೆ ಕೆಲ ಮಹಿಳೆಯರಿಗೆ ಇದು ತ್ರಾಸ ಕೊಡುವುದನ್ನು ಸಹ ಕಾಣಬಹುದು' ಎನ್ನುತ್ತಾರೆ ಡಾ. ವಿದ್ಯಾ. 'ಗರ್ಭಾಶಯ ಗಡ್ಡೆಗಳಿಗೂ ರಕ್ತಪೂರೈಕೆಯಾಗುತ್ತದೆ. ಆದರೆ ಇವು ಹಾರ್ಮೋನ್‌ಗಳ ಪ್ರಭಾವದಿಂದ ಉಂಟಾಗುತ್ತವೆ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ. ಮಹಿಳೆಯರಲ್ಲಿ ಈಸ್ಟ್ರೋಜನ್ ಹಾರ್ಮೋನ್ ಗರಿಷ್ಠ ಮಟ್ಟದಲ್ಲಿರುವಾಗ ಈ ಗಡ್ಡೆಗಳು ಅತ್ಯಂತ ವೇಗವಾಗಿ ಬೆಳೆಯುವ ಸಾಧ್ಯತೆ ಇದೆ. ಮಧ್ಯವಯಸ್ಸಿನ ಮಹಿಳೆಯರಲ್ಲಿ ಇದು ಸಾಮಾನ್ಯವಾದರೂ ಹದಿಹರೆಯದವರಲ್ಲಿ ಕಾಣಿಸುವ ಸಾಧ್ಯತೆ ಕಡಿಮೆ. ಋತುಬಂಧದ ನಂತರ ಇವು ನೈಸರ್ಗಿಕವಾಗಿಯೇ ಕರಗಿ ಹೋಗುತ್ತದೆ' ಎನ್ನುತ್ತಾರೆ ಅವರು.

## ಲಕ್ಷಣಗಳೇನು?

ಗರ್ಭಕೋಶ ಗಡ್ಡೆಗಳಿಂದ ಉಂಟಾಗುವ ಪ್ರಮುಖ ಲಕ್ಷಣಗಳೆಂದರೆ ಮುಟ್ಟಿನ ಸಮಯದಲ್ಲಿ ಅತಿಯಾದ ರಕ್ತಸ್ರಾವ, ವಿಪರೀತ ನೋವು, ಆಗಾಗ ಮೂತ್ರವಿಸರ್ಜನೆ ಮಾಡಬೇಕೆನಿಸುವುದು, ರಕ್ತಹೀನತೆ ಮುಂತಾದವು.